ಓದುವ ಅಭಿರುಚಿ ಬೆಳೆಸುವ

ೠ

# ಸಾಹಿತ್ಯ ಮಂಟಪ




ಜನವರಿ–ಫೆಬ್ರವರಿ–ಮಾರ್ಚ್ ೨೦೨೫

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

ಆರಂಭ ಯೋಜನೆ
Arambha 2024-25 Project
is Supported by Many
Individual Donors

# ಸದಾಶಯ

ಪ್ರೀತಿಯ ಮಕ್ಕಳೇ,

ಓದುವ ಅಭಿರುಚಿ ಹೆಚ್ಚಿಸಿಕೊಳ್ಳಲು ಪ್ರೇರಣೆ ನೀಡುವ 'ಸಾಹಿತ್ಯ ಮಂಟಪ' ನಿಮ್ಮ ಕೈಯಲ್ಲಿದೆ. ಇದರಲ್ಲಿ ಕನ್ನಡ ಕಥೆ – ಕವನಗಳ ಜೊತೆಗೆ, ಮೂಲ ಇಂಗ್ಲೀಷ ಕಥೆಯೊಂದಿಗೆ ಅದರ ಅನುವಾದ ಕೂಡ ಇವೆ.

ವ್ಯಕ್ತಿತ್ವವನ್ನು ಸುಂದರವಾಗಿ ಅರಳಿಸುವ ಶಕ್ತಿ ಹೊಂದಿರುವ ಸಾಹಿತ್ಯ ಮಂಟಪವು ನಿಮ್ಮಲ್ಲಿ ಹೊಸ ಆಲೋಚನೆಗಳಿಗೆ ದಾರಿದೀಪವಾಗಲಿ ಎಂಬುದು ನಮ್ಮ ಆಶಯ.

ಪ್ರತಿ ಕಥೆಯ ಕೊನೆಗೆ ಆಕರಗಳನ್ನು ಕೊಡಲಾಗಿದೆ. ಶಿಕ್ಷಕರ ಸಹಾಯದಿಂದ ನಿಮ್ಮ ಶಾಲೆಯ ಗ್ರಂಥಾಲಯಕ್ಕೆ ಆ ಪುಸ್ತಕಗಳನ್ನು ತರಿಸಿಕೊಂಡು ಇನ್ನೂ ಹೆಚ್ಚುಹೆಚ್ಚು ಓದಲು ಯತ್ನಿಸಿ.

ಸಾಹಿತ್ಯ ಮಂಟಪವನ್ನು ಸವಿದ ಬಳಿಕ ನಿಮ್ಮ ಅಭಿಪ್ರಾಯಗಳನ್ನು ಧ್ವನಿಯೊಂದಿಗೆ ಹಂಚಿಕೊಂಡರೆ ನಮಗೆಲ್ಲಾ ಸಂತಸವಾಗುತ್ತದೆ.

ಧನ್ಯವಾದಗಳೊಂದಿಗೆ...

**– ಧ್ವನಿ ಬಳಗ**

ಈ

# ಸಾಹಿತ್ಯ ಮಂಟಪದಲ್ಲಿ

* ವಿಚಿತ್ರ ಧ್ವನಿಯ ರಹಸ್ಯ

– ಹ.ಮ. ಪೂಜಾರ– ೪

* ಗುಂಡ, ಲಡ್ಡು ಮತ್ತು ಇಲಿಗಳು

– ಈರಣ್ಣ ಬೆಂಗಾಲಿ – ೧೨

* ಗೌರಿ ಬಿಟ್ಟಿರದ ಸೂರಿ

– ಶರಣು ಚೆಟ್ಟಿ – ೧೯

* ವನದೇವತೆಯ ಬಯಕೆ


– ಅನು: ಪ್ರೇಮಾ ಶಿವಾನಂದ – ೨೭

* Forest, what would you like

– ಅಂತರಜಾಲ – ೩೧

# ವಿಚಿತ್ರ ಧ್ವನಿಯ ರಹಸ್ಯ

– ಹ.ಮ. ಪೂಜಾರ



ರವಿ ಮತ್ತು ಲೀಲಾ ಅಜ್ಜನ ಊರಿಗೆ ಹೋಗಿದ್ದರು. ಅವರು ಅಜ್ಜನ ಮನೆಯಲ್ಲಿ ಉಲ್ಲಾಸದಿಂದ ಇದ್ದರು. ಒಂದು ದಿನ ಅಜ್ಜನ ಜೊತೆಗೆ ತೋಟಕ್ಕೆ ಹೋಗಿದ್ದರು. ತೋಟಾನ್ನೆಲ್ಲ ಸುತ್ತಾಡಿ ನೋಡಿದರು.

ಊಟದ ಸಮಯವಾಯಿತು. ಅಜ್ಜಿ ಊಟಕ್ಕೆ ಕರೆದಳು. ಗಿಡದ ನೆರಳಿಗೆ ಕುಳಿತರು. ಊಟ ಮಾಡಿದರು. ಅಲ್ಲಿಯೇ ನೆರಳಿನಲ್ಲಿ ಮತನಾಡುತ್ತ ಕುಳಿತರು. ಲೀಲಾ ಗುಡ್ಡದ ಕಡೆ ಕೈ ಮಾಡಿ

ತೋರಿಸುತ್ತ “ ಆ ಗುಡ್ಡದ ಮೇಲೆ ಏನಿದೆ?” ಎಂದು ಅಜ್ಜನಿಗೆ ಕೇಳಿದಳು. “ಅಲ್ಲಿ ಒಂದು ಹಳೆಯ ದೇಗುಲವಿದೆ.” ಎಂದು ಅಜ್ಜ ಹೇಳಿದ.

“ಒಮ್ಮೆ ಅಲ್ಲಿ ಹೋಗಿ ನೋಡಿ ಬರೋಣವೆ?” ಎಂದನು ರವಿ. ರವಿಯ ಮಾತು ಕೇಳುತ್ತಲೇ ಅಜ್ಜಿ ಗಾಬರಿ ಆದಳು. “ಬೇಡ ಅಲ್ಲಿಗೆ ಹೋಗುವುದು ಬೇಡ ಅದೊಂದು ರಹಸ್ಯ ಸ್ಥಳ. ಅಲ್ಲಿ ಪಿಶಾಚಿಗಳು ವಾಸವಾಗಿವೆ. ಅದರ ಬಗ್ಗೆ ಮತ್ತೊಮ್ಮೆ ಆಲೋಚಿಸುವುದೇ ಬೇಡ.” ಎಂದು ಹೇಳಿದಳು ಅಜ್ಜಿ.

“ಅಜ್ಜಿ ನೀನು ಪಿಶಾಚಿಗಳನ್ನು ನಂಬುತ್ತೀಯಾ? ಅದೆಲ್ಲ ಮೂಢನಂಬಿಕೆ. ಪ್ರಪಂಚದಲ್ಲಿ ಎಲ್ಲಿಯೂ ಪಿಶಾಚಿಗಳಿಲ್ಲ.” ಎಂದು ವಾದಿಸಿದಳು ಲೀಲಾ.

“ಹೌದು ಹೌದು ಅದೊಂದು ಮೂಢನಂಬಿಕೆಯೆಂದು ಓದಿದ್ದೇವೆ.” ಎಂದು ರವಿಯು ಲೀಲಾಳ ಮಾತಿಗೆ ದನಿಗೂಡಿಸಿದ.

"ಹೌದು ಮಕ್ಕಳೇ ನಿಮ್ಮ ಅಜ್ಜಿ ಹೇಳಿದ್ದು ಸತ್ಯ. ಸಂಜೆ ಆಗುತ್ತಲೇ ಅಲ್ಲಿಂದ ಭಯಾನಕ ಧ್ವನಿ ಬರಲು ಪ್ರಾರಂಭಿಸುತ್ತದೆ. ಅದು ಪಿಶಾಚಿ ಧ್ವನಿ ಅಲ್ಲದೆ ಮತ್ತಿನ್ನೇನು?" ಎಂದು ಅಜ್ಜ ಹೇಳಿದ.

ಅದೊಂದು ಮೂಢನಂಬಿಕೆ ಎಂಬುದನ್ನು ಮಕ್ಕಳು ದೃಢವಾಗಿ ನಂಬಿದ್ದರು. ಆದ್ದರಿಂದ ಗುಡ್ಡದ ಮೇಲೆ ಒಮ್ಮೆ ಹೋಗಬೇಕು, ದೇಗುಲವನ್ನು ನೋಡಿ ಬರಬೇಕೆಂದು ಮಕ್ಕಳು ನಿಶ್ಚಯಿಸಿದರು.

ಮಾರನೆಯ ದಿನ ಸಾಯಂಕಾಲ ಮಕ್ಕಳು ಮನೆಯಲ್ಲಿ ಹೇಳದೇ ಹೊರಟರು. ಕೈಯಲ್ಲಿ ಇಬ್ಬರೂ ಒಂದೊಂದು ಚಾಕು ತೆಗೆದುಕೊಂಡರು.

ಒಂದು ಬ್ಯಾಟರಿಯನ್ನೂ ತೆಗೆದುಕೊಂಡರು. ಧೈರ್ಯದಿಂದ ಗುಡ್ಡ ಹತ್ತಲು ಪ್ರಾರಂಭಿಸಿದರು. ಮಾರ್ಗದಲ್ಲಿ ಮಕ್ಕಳು ಇಬ್ಬರು ವ್ಯಕ್ತಿಗಳನ್ನು ಕಂಡರು. ಅವರು ಠಕ್ಕರಂತೆ ಕಾಣುತ್ತಿದ್ದರು.

ಅವರಿಬ್ಬರೂ ಗುಡ್ಡದ ಕೆಳಗೆ ಹೊರಟಿದ್ದರು. ಅವರನ್ನು ನೋಡಿ ಮಕ್ಕಳು ಕಂಟಿಯ ಮರೆಗೆ ಅಡಗಿಕೊಂಡರು. ಅಷ್ಟರಲ್ಲಿ ದೇಗುಲದಿಂದ ವಿಚಿತ್ರ ಧ್ವನಿ ಬರತೊಡಗಿತು. ಆ ಧ್ವನಿ ಕೇಳಿ ಲೀಲಾ ಗಾಬರಿ ಆದಳು. “ಈ ವಿಚಿತ್ರ ಧ್ವನಿಗೆ ಜನರು ಅಂಜಿದ್ದಾರೆ. ಹೀಗಾಗಿ ಗುಡ್ಡದ ಮೇಲೆ ಜನರ ಸುಳಿವೇ ಇಲ್ಲ.” ಎಂದಳು ಲೀಲಾ.

ಸದ್ದು ಮಾಡದೇ ನಿಧಾನವಾಗಿ ಮಕ್ಕಳು ಆ ಕಟ್ಟಡದ (ದೇಗುಲ) ಕಡೆ ಬಂದರು. ಕಟ್ಟಡದ ಬಾಗಿಲ ಹತ್ತಿರ ಧ್ವನಿವರ್ಧಕ ಇರುವುದನ್ನು ಮಕ್ಕಳು ಕಂಡರು. ವಿಚಿತ್ರ ಧ್ವನಿ ಬರುವುದು ಈ ಧ್ವನಿವರ್ಧಕಲಿಂದಲೇ ಎಂಬುದನ್ನು ಅರಿತರು.

ಸುತ್ತಲೂ ಕತ್ತಲೆ ಆವರಿಸಿತ್ತು. ಧೈರ್ಯ ತಂದುಕೊಂಡರು. ನಿಧಾನವಾಗಿ ಕಟ್ಟಡದ ಒಳಗೆ ಹೋದರು. ಮಧ್ಯದ ಕೋಣೆಗೆ ಮಾತ್ರ ಬೆಳಕು ಇತ್ತು. ಸಣ್ಣ ಕಿಂಡಿಯಿಂದ ಮಕ್ಕಳು ಇಣಿಕಿ

ನೋಡಿದರು. ಒಳಗಡೆ ಕೆಲವು ಜನರು ಕಂಡರು. ಅವರು ಏನೋ ಪ್ಯಾಕಿಂಗ್ ಮಾಡುತ್ತಿರುವುದು ಕಂಡಿತು.

ಅವರಲ್ಲಿ ಒಬ್ಬ ಠಕ್ಕ, "ನಾವು ಇಲ್ಲಿ ಅಫೀಮು ಪ್ಯಾಕ್ ಮಾಡುತ್ತೇವೆ. ರಾತ್ರಿ ಕಳ್ಳ ಸಾಗಣೆ ಮಾಡುತ್ತೇವೆ. ನಾವು ಮಾಡುತ್ತಿರುವ ಕೆಲಸವೇನಾದರೂ ಸರಕಾರಕ್ಕೆ ಗೊತ್ತಾದರೆ ಹೇಗೆ?" ಎಂದು ಇತರರಿಗೆ ಕೇಳಿದ.

"ನಾವು ಧ್ವನಿವರ್ಧಕದಿಂದ ವಿಚಿತ್ರ ಧ್ವನಿ ಹೊರಡಿಸುತ್ತೇವೆ. ಅದರಿಂದ ಇಲ್ಲಿ ಪಿಶಾಚಿಗಳಿವೆ ಎಂದು ಜನರು ನಂಬಿದ್ದಾರೆ. ಆನರು ಭಯಗೊಂಡಿದ್ದಾರೆ. ಹೀಗಾಗಿ ಗುಡ್ಡದ ಮೇಲೆ ಯಾರೂ ಬರಲಾರರು. ಆದ್ದರಿಂದ ನಮ್ಮ ಕಳ್ಳ ಸಾಗಾಣಿಕೆ ಸರಕಾರಕ್ಕೆ ಗೊತ್ತಾಗುವುದೇ ಇಲ್ಲ." ಎಂದು ಇನ್ನೊಬ್ಬ ಠಕ್ಕ ಎದೆ ಉಬ್ಬಿಸಿ ಹೇಳಿದ.

ಕಳ್ಳರ ಮಾತಿನಿಂದ ಮಕ್ಕಳಿಗೆ ವಿಷಯ ಗಿಳಿಯಿತು. ವಿಚಿತ್ರ ಧ್ವನಿಯ

ರಹಸ್ಯ ತಿಳಿದುಕೊಂಡರು. ಬ್ಯಾಟರಿಯ ಬೆಳಕಿನಲ್ಲಿ ನಿಧಾನವಾಗಿ ಗುಡ್ಡ ಇಳಿದರು. ಮನೆಗೆ ಹೋದರು. ಮಕ್ಕಳು ಇಷ್ಟೊತ್ತಿನಲ್ಲಿ ಎಲ್ಲಿ ಹೋದರು ಎಂದು ಚಿಂತಿಸುತ್ತಲೇ ಅಜ್ಜ-ಅಜ್ಜಿ ಕುಳಿತಿದ್ದರು.

ಮಕ್ಕಳು ಬಂದದ್ದನ್ನು ಕಂಡು ಸಂತೋಷ ಪಟ್ಟರು. "ಇಷ್ಟೊತ್ತಿನವರೆಗೆ ಎಲ್ಲಿ ಹೋಗಿದ್ದಿರಿ? ನಾವೆಲ್ಲ ಕಳವಳಗೊಂಡಿದ್ದೆವು." ಎಂದು ಅಜ್ಜಿ ಕೇಳಿದಳು.

"ನಾವು ಪಿಶಾಚಿಗಳನ್ನು ನೋಡಲು ಹೋಗಿದ್ದೆವು. ಗುಡ್ಡ ಏರಿ ಹೋದೆವು. ಹಳೆಯ ದೇಗುಲದಲ್ಲಿ ಇಣುಕಿ ನೋಡಿದೆವು. ಅಲ್ಲಿ ನಾಲ್ಕು ಪಿಶಾಚಿಗಳಿವೆ. ಅವುಗಳ ವಿಚಿತ್ರ ಧ್ವನಿಯ ಗುಟ್ಟನ್ನೂ ತಿಳಿದುಕೊಂಡು ಬಂದೆವು." ಎಂದು ರವಿ ಹೇಳಿದ. ವಿಷಯ ಗುಟ್ಟಾಗಿಟ್ಟ. ಲೀಲಾ ಗುಟ್ಟು ರಟ್ಟು ಮಾಡಿದಳು. ತಾವು ಗುಡ್ಡದ ಮೇಲಿನ ದೇಗುಲದಲ್ಲಿ ನೋಡಿದ್ದನ್ನೆಲ್ಲ ವಿವರಿಸಿದಳು.

ಮಕ್ಕಳ ಮಾತನ್ನು ಅಜ್ಜ ಆಲಿಸಿದ. ಕೂಡಲೇ ಕಾರ್ಯ ಪ್ರವರ್ತನಾದ. ಜನರನ್ನು ಕೂಗಿ ಕರೆದ. ಜನರು ಬಂದರು. ಅವರಿಗೆಲ್ಲ ವಿಷಯ ತಿಳಿಸಿದ. ಜನರು ಮತ್ತೆ ಮನೆಗೆ ಹೋದರು. ಒಂದೊಂದು ಲಾಠಿ ಹಿಡಿದುಕೊಂಡು ಬಂದರು. ಒಬ್ಬರು ಲೈಸೆನ್ಸ್ ಪಡೆದ ಪಿಸ್ತೂಲ್ ತಂದರು. ಅಜ್ಜ ಹಗ್ಗವನ್ನು ತೆಗೆದುಕೊಂಡ.

ಹೀಗೆ ಸುಸಜ್ಜಿತ ಇಪ್ಪತ್ತು ಜನರ ಗುಂಪು ಗುಡ್ಡ ಹತ್ತಿತು. ದೇಗುಲ ಸಮೀಪ ಹೋದರು. ಅವರಲ್ಲಿ ಕೆಲವರು ದೇಗುಲ ಸುತ್ತ ನಿಂತರು. ಉಳಿದವರು ನಿಧಾನವಾಗಿ ಒಳಗೆ ಹೋದರು. ಪಿಸ್ತೂಲಿನಿಂದ ಹುಸಿಗುಂಡು ಹಾರಿಸಿದರು. ಒಳಗಿದ್ದ ಕಳ್ಳರು ಓಡಲು ಪ್ರಯತ್ನಿಸಿದರು. ಲಾಠಿ ಹಿಡಿದು ಒಳ ಹೋದವರು ಕಳ್ಳರನ್ನು ಸುತ್ತುವರೆದರು.

ಕಳ್ಳರು ನಿಸ್ಸಹಾಯಕರಾದರು. ಊರವರು ಹಗ್ಗದಿಂದ ಕಳ್ಳರನ್ನು

ಬಂಧಿಸಿದರು. ಬಂಧಿಸಿದ ಕಳ್ಳರನ್ನು ಸಮೀಪದ ಪೋಲಿಸ್ ಠಾಣೆಗೆ ಒಯ್ದರು. ಪೋಲಿಸರಿಗೆ ಒಪ್ಪಿಸಿದರು. ಅಂದಿನಿಂದ ಆ ಊರ ಜನರು ನಿರ್ಭಯದಿಂದ ಬದುಕಿದರು. ವಿಚಿತ್ರ ಧ್ವನಿಯ ರಹಸ್ಯ ಕಂಡು ಹಿಡಿದ ಮಕ್ಕಳನ್ನು ಜನರು ಹೊಗಳಿದ್ದೇ ಹೊಗಳಿದ್ದು*

**ಲೇಖಕರು: ಹ.ಮ.ಪೂಜಾರ**
**ಆಕರ: ಚತುರ ಚಿಣ್ಣರು**
**ಪ್ರಕಾಶಕರು: ವಿದ್ಯಾಚೇತನ ಪ್ರಕಾಶನ,**
**ಸಿಂದಗಿ, ಮೊ: 9448986222**

## ಮನ ಮಂಥನ

* ನೀನು ಮತ್ತು ನಿನ್ನ ಗೆಳೆಯರು ಕೂಡಿ ಮಾಡಿದ ಸಾಹಸವನ್ನು ಆಧರಿಸಿ ಒಂದೆರಡು ಚಿತ್ರ ಬಿಡಿಸಿ, ಬಣ್ಣ ಹಚ್ಚು.

# ಗುಂಡ, ಲಡ್ಡು ಮತ್ತು ಇಲಿಗಳು

ಖುಷಿ ಓದಿಗಾಗಿ

– ಈರಣ್ಣ ಬೆಂಗಾಲಿ





**ಆ**ರನೇ ತರಗತಿ ಓದುತ್ತಿದ್ದ ಗುಂಡ ಎಲ್ಲವೂ ತನಗೇ ಬೇಕು, ಇನ್ನಷ್ಟು, ಮತ್ತಷ್ಟು ಬೇಕು ಎಂಬ ಮನೋಭಾವ ಹೊಂದಿದ್ದ.

ಗುಂಡ ತನ್ನ ತಂಗಿಗೂ ಸಹ ತನ್ನಲ್ಲಿದ್ದ ತಿಂಡಿ ತಿನಿಸನ್ನು ಹಂಚಿ ತಿನ್ನುತ್ತಿರಲಿಲ್ಲ. ಆಟಿಕೆಗಳನ್ನು ಹಂಚಿಕೊಳ್ಳುತ್ತಿರಲಿಲ್ಲ. ಒಂದು ದಿನ ಸಾಯಂಕಾಲ ಗುಂಡನ ಪಕ್ಕದ ಮನೆಯ ಆಂಟಿ ತಿನ್ನಲಿಕ್ಕೆ ತಟ್ಟೆ ತುಂಬಾ ಲಡ್ಡುಗಳನ್ನು ಕೊಡಲು ಬಂದರು.

ಗುಂಡ ಆಗ ತಾನೇ ಶಾಲೆಯಿಂದ ಬಂದಿದ್ದ. ಗುಂಡನ ಅಪ್ಪ ಆಫೀಸ್‌ನಿಂದ ಇನ್ನೂ ಬಂದಿರಲಿಲ್ಲ. ಗುಂಡನ ತಾಯಿ, ತಂಗಿ ಮಾರ್ಕೆಟ್‌ಗೆ ಹೋಗಿದ್ದರು. ಆದ್ದರಿಂದ ಗುಂಡನೇ ಬಂದು ಆಂಟಿಯ ಕೈಯಿಂದ ಲಡ್ಡುವಿನ ತಟ್ಟೆಯನ್ನು ತೆಗೆದುಕೊಂಡ.

"ಅಮ್ಮ ಮನೆಯಲ್ಲಿ ಇಲ್ಲನೋ ಗುಂಡ" ಎಂದು ಪಕ್ಕದ ಮನೆ ಆಂಟಿ ವಿಚಾರಿಸಿದರು. ಆಗ ಗುಂಡ," ಅಮ್ಮ, ತಂಗಿ ಮಾರ್ಕೆಟ್‌ಗೆ ಹೋಗಿದ್ದಾರೆ." ಎಂದು ತಿಳಿಸಿದನು. "ತಟ್ಟೆಯ ತುಂಬಾ ಲಡ್ಡುಗಳಿವೆ. ಅಪ್ಪ, ಅಮ್ಮ, ತಂಗಿ ಮತ್ತು ನಿನಗೆ, ಎಲ್ಲರಿಗೂ ಸಾಲುವಷ್ಟು ಲಡ್ಡುಗಳು ಇವೆ. ಅಮ್ಮ ಬಂದ ನಂತರ ಅಮ್ಮನಿಗೆ ನಾನು ಲಡ್ಡು ಕೊಟ್ಟ ಬಗ್ಗೆ ತಿಳಿಸು." ಎಂದು ಹೇಳಿ ಹೋದರು.

ಗುಂಡನಿಗೆ, ಲಡ್ಡುವಿನ ಘಮ, ಘಮ ವಾಸನೆ ಮೂಗಿಗೆ ತಾಗಿ, ಕಣ್ಣುಗಳು ಅರಳಿದವು. ಬಾಯಲ್ಲಿ ನೀರು ಬಂತು. ಲಡ್ಡುಗಳು ಮನಸ್ಸನ್ನು ಸೆಳೆದವು.

ತಟ್ಟೆಯಲ್ಲಿ ಹದಿನೈದು ಲಡ್ಡುಗಳು ಇದ್ದವು. ಗುಂಡ ತಡಮಾಡದೆ ಲಡ್ಡುಗಳನ್ನು ಗಬ, ಗಬನೇ ಬಾಯಲ್ಲಿ ತುರುಕಿಕೊಂಡು, ತಿನ್ನಲು ಶುರು ಮಾಡಿದ.

ಲಡ್ಡುಗಳು ತುಂಬಾ ರುಚಿಕರ ಆಗಿದ್ದವು. "ಆಂಟಿಯ ಕೈರುಚಿ ಚೆನ್ನಾಗಿದೆ. ಲಡ್ಡು ಮಾಡುವುದು ಹೇಗೆ ಎಂದು ಆಂಟಿಯಿಂದ ಅಮ್ಮ ತಿಳಿದುಕೊಂಡರೆ ಚೆನ್ನಾಗಿ ಇರುತ್ತದೆ. ಮನೆಯಲ್ಲಿ ಯಾವಾಗ ಬೇಕೋ ಆವಾಗ ಬೇಕಾದಷ್ಟು ಮಾಡಿಸಿಕೊಂಡು ತಿನ್ನಬಹುದು." ಎಂದು ಆಲೋಚಿಸುತ್ತಲೇ ಹತ್ತು ಲಡ್ಡುಗಳನ್ನು ತಿಂದು ಬಿಟ್ಟ...!

''ಇನ್ನು ಉಳಿದ ಐದು ಲಡ್ಡುಗಳು ಅಪ್ಪ, ಅಮ್ಮ, ತಂಗಿಗೆ ಇರಲಿ." ಎಂದು ಅಂದುಕೊಳ್ಳುವಷ್ಟರಲ್ಲಿಯೇ ಗುಂಡನ ಮನಸ್ಸು ಧಿಢೀರನೇ ಬದಲಾಗಿ ಬಿಟ್ಟಿತು. ''ಇನ್ನೆರಡು ಲಡ್ಡುಗಳನ್ನು ತಿಂದು ಬಿಟ್ಟರಾಯಿತು." ಎನ್ನುತ್ತಲೇ ಎರಡೂ ಲಡ್ಡುಗಳನ್ನು ತಿಂದುಬಿಟ್ಟ.

ಉಳಿದದ್ದು ಮೂರು ಲಡ್ಡುಗಳು ಮಾತ್ರ. "ಅಪ್ಪ, ಅಮ್ಮ, ತಂಗಿಗೆ ತಲಾ ಒಂದೊಂದು ಲಡ್ಡು ಇರಲಿ." ಎಂದು ಮನಸ್ಸಿನಲ್ಲೇ ಅಂದುಕೊಂಡ. ಗುಂಡನ ಆಸೆಯು ಮನಸ್ಸು ಆ ಮೂರೂ ಲಡ್ಡುಗಳನ್ನೂ ಬಿಡಲಿಲ್ಲ.

"ನಾಳೆ ಶಾಲೆಗೆ ಹೋಗುವಾಗ ದಾರಿಯಲ್ಲಿ ತಿಂದರಾಯಿತು." ಎನ್ನುತ್ತ ಮೂರು ಲಡ್ಡುಗಳನ್ನು ಶಾಲೆಗೆ ಹಾಕಿಕೊಂಡು ಹೋಗುವ ಸಮವಸ್ತ್ರದ ಅಂಗಿಯ ಜೇಬಿನಲ್ಲಿ ಇಟ್ಟು ಬಿಟ್ಟ. ಲಡ್ಡು ಹಾಕಿದ ತಟ್ಟೆಯನ್ನು ತೊಳೆದು ಅಡುಗೆ ಮನೆಯ ಮೂಲೆಯೊಂದರಲ್ಲಿ ಯಾರಿಗೂ ಕಾಣದಂತೆ ಬಚ್ಚಿಟ್ಟ.

"ಒಂದೆರಡು ದಿನಗಳ ನಂತರ ತಟ್ಟೆಯನ್ನು ಹೊರಗೆ ತೆಗೆದರಾಯಿತು. ಆಗ ಅಮ್ಮನಿಗೆ ಪಕ್ಕದ ಮನೆಯ ಆಂಟಿ ತಟ್ಟೆ ಯಾವಾಗ ಕೊಟ್ಟಿದ್ದು ಎಂದು ನೆನಪಿಗೆ ಬರುವುದಿಲ್ಲ. ಪಕ್ಕದ ಮನೆಯ ಆಂಟಿ ಆವತ್ತು ಕೊಟ್ಟಿದ್ದರಲ್ಲಮ್ಮ. ಎಂದು ನಾನೇ

ನೆನಪು ಮಾಡುವೆ, ಆಗ ಅಮ್ಮ ಅದೇ ತಟ್ಟೆಯಲ್ಲಿ ಪಕ್ಕದ ಮನೆಯ ಆಂಟಿಗೆ ಏನಾದರೂ ತಿನಿಸನ್ನು ಇಟ್ಟು ಮರಳಿಸಿ ಬಿಡುತ್ತಾರೆ." ಎಂದು ಮನದಲ್ಲೇ ಏನೇನೋ ಲೆಕ್ಕಾಚಾರ ಹಾಕಿದನು.

ರಾತ್ರಿ ಕಳೆದು, ಬೆಳಿಗ್ಗೆ ಮೂಡಣದಲ್ಲಿ ಸೂರ್ಯ ಮೂಡಿದ. ಗುಂಡ ಎಂದಿನಂತೆ ಬ್ರಷ್ ಮಾಡಿ, ಸ್ನಾನ ಮಾಡಿ, ಬೆಳಗಿನ ಉಪಹಾರವನ್ನು ಮಾಡಿದ. ಶಾಲೆಗೆ ಸಿದ್ದನಾಗಲು, ಕೋಣೆಗೆ ಹೋದ. ಶಾಲೆಯ ಸಮವಸ್ತ್ರವಾದ ಚಡ್ಡಿಯನ್ನು ಹಾಕಿಕೊಂಡ. ನಂತರ ಶಾಲೆಯ ಅಂಗಿಯನ್ನು ತೆಗೆದು ಕೊಳ್ಳಲು ಹೋದ. ನೋಡಿದರೆ ಅಂಗಿಯ ಜೇಬನ್ನು ಇಲಿಗಳು ಕಡಿದಿವೆ! ನಿನ್ನೆ ರಾತ್ರಿ ಇಟ್ಟಿದ್ದ ಮೂರೂ ಲಡ್ಡುಗಳನ್ನು ಕಚ್ಚಿ ಕಚ್ಚಿ ತಿಂದಿದ್ದೂ ಅಲ್ಲದೇ, ಅಂಗಿಯನ್ನು ಸಹ ಬಿಡದೇ ಕಚ್ಚಿದ್ದವು.

ಶಾಲೆಯ ಅಂಗಿಯ ಅವಸ್ಥೆಯನ್ನು ನೋಡಿ ಗುಂಡ ಅಚ್ಚರಿಯಾದ. ಅದೇ ಸಮಯಕ್ಕೆ ಗುಂಡನ

ಅಮ್ಮ ಬಂದಳು. ಶಾಲೆಯ ಅಂಗಿಯನ್ನು ಗಮನಿಸಿ,"ಏನು ಇದೆಲ್ಲ?" ಎಂದು ಜೋರಾಗಿಯೇ ಗುಂಡನನ್ನು ವಿಚಾರಿಸಿದಳು.

ಅಮ್ಮನ ಜೋರಾದ ಮಾತಿಗೆ ಗುಂಡನ ಅಪ್ಪ ಮತ್ತು ತಂಗಿಯೂ ಕೋಣೆಗೆ ಬಂದರು. "ಏನಾಯಿತು?" ಎಂದು ಅಪ್ಪ ಕೇಳಿದ. ಅಮ್ಮ ಗುಂಡನ ಜೇಬು ತೋರಿಸಿದಳು. ಅಪ್ಪ ಗುಂಡನತ್ತ ಮುಖ ಮಾಡಿ "ಇದೆಲ್ಲಾ ಹೇಗಾಯಿತು?" ಎಂದು ಗಟ್ಟಿಯಾಗಿ ಗದರಿಸಿ ಕೇಳಿದ. ಗುಂಡ ಕೊಂಚ ಭಯಪಡುತ್ತಲೇ, ಅಪ್ಪನಿಗೆ ನಡೆದ ವಿಷಯವನ್ನೆಲ್ಲ ತಿಳಿಸಿದನು.

ಅದಕ್ಕೆ ಅಪ್ಪ ಸಿಟ್ಟು ಮಾಡಿಕೊಳ್ಳದೇ ಸಮಾಧಾನದಿಂದ ಗುಂಡನಿಗೆ ಹೇಳಿದ. "ಮೊನ್ನೆಯಷ್ಟೇ ಕೊಡಿಸಿದ ಶಾಲೆಯ ಹೊಸ ಅಂಗಿ ಇದು. ಅಂಗಿಯ ಜೇಬನ್ನು ಮತ್ತು ಜೇಬಿನ ಸುತ್ತಲೂ ಇಲಿಗಳು ಕಡಿದು, ತೂತು ಮಾಡಿವೆ. ಈ ಅಂಗಿಯನ್ನು ತೊಡಲು

ಬರುವುದಿಲ್ಲ. ಈಗ ಹೊಸ ಅಂಗಿ ತರಬೇಕು. ಅದಕ್ಕೆ ದುಡ್ಡು ಬೇಕು. ಇದು ಅನಾವಶ್ಯಕ ವೆಚ್ಚ ಅಲ್ಲವಾ? ನಾವೆಲ್ಲರೂ ಹಂಚಿ ತಿನ್ನಬೇಕು. ಬಚ್ಚಿಟ್ಟು ತಿನ್ನಲು ಹೋದರೆ ಹೀಗೆ ಏನಾದರೂ ಎಡವಟ್ಟು ಆಗುತ್ತದೆ." ಎಂಬುದನ್ನು ಮನವರಿಕೆ ಮಾಡಿ ಕೊಟ್ಟ. ಅಂದಿನಿಂದ ಗುಂಡ ತನ್ನಲ್ಲಿದ್ದ ತಿಂಡಿಯನ್ನು ಗೆಳೆಯರೊಂದಿಗೆ ಹಂಚಿಕೊಂಡು ತಿನ್ನತೊಡಗಿದ *

**ಲೇಖಕರು: ಈರಣ್ಣಾ ಬೆಂಗಾಲಿ,**
**ಆಕರ: ಮೊಸಳೆ ಮತ್ತು ಮಿಂಚುಳ್ಳಿ**
**ಪ್ರಕಾಶನ: ಕೃಷ್ಣಾರುಣ ಪ್ರಕಾಶನ**
**ರಾಯಚೂರು, ಮೊ: 9986724198**

**ಮನ ಮಂಥನ**

* ನಿನಗೆ ಇಷ್ಟವಾಗಿವ ತಿನಿಸು ಯಾವುದು?

* ಗೆಳೆಯರೊಂದಿಗೆ ತಿಂಡಿ–ತಿನಿಸನ್ನು ಹಂಚಿ ತಿಂದಾಗ ನಿನಗೆ ಏನು ಅನಿಸುತ್ತದೆ ಎಂಬುದರ ಕುರಿತು ಮಾತನಾಡು.

# ಗೌರಿ ಬಿಟ್ಟಿರದ ಸೂರಿ

**– ಶರಣು ಚಟ್ಟಿ**

ಖುಷಿ ಓದಿಗಾಗಿ



ಅಲ್ಲಾಪುರ ಎಂಬ ಹಳ್ಳಿಯಲ್ಲಿ ಸೂಗಪ್ಪ ಮತ್ತು ಸಾಬವ್ವ ರೈತ ದಂಪತಿಗಳಿಗೆ ಗೌರಿ ಮತ್ತು ಸೋಮು ಎಂಬ ಮಕ್ಕಳಿದ್ದರು. ಒಂದು ದಿನ ಶಾಲೆಯಿಂದ ಮನೆಗೆ ಬರುವಾಗ ಜೋರಾಗಿ ಮಳೆ ಬರುತ್ತಿತ್ತು. ಅಕ್ಕ ತಮ್ಮ ಇಬ್ಬರೂ ಕೈ ಕೈ ಹಿಡಿದು ಮನೆ ಕಡೆ ಓಡುತ್ತಿದ್ದರು. ಮಳೆಯ ಸದ್ದಿನಲ್ಲಿ ನಾಯಿಮರಿಯ ಕೂಗು ಗೌರಿಗೆ ಕೇಳಿಸಿತು. ಅತ್ತಿತ್ತ ಕಣ್ಣು ಹಾಯಿಸುವಷ್ಟರಲ್ಲಿ ದಾರಿ ಪಕ್ಕದ ಚರಂಡಿಯಲ್ಲಿ ನಾಯಿಮರಿ ಬಿದ್ದು ಅಳುತ್ತಿತ್ತು. ಗೌರಿ– ಸೋಮು ಇಬ್ಬರೂ

ಸೇರಿ ನಾಯಿ ಮರಿಯನ್ನು ಎತ್ತಿಕೊಂಡರು. ಪಾಪ, ನಾಯಿಮರಿಯ ಒಂದು ಕಾಲು ಮುರಿದಿತ್ತು. ಇಬ್ಬರೂ ನಾಯಿಮರಿಯನ್ನು ಉಪಚರಿಸಲು ಮನೆಗೆ ಹೊತ್ತುಕೊಂಡು ಬಂದರು.

ನಾಯಿಮರಿಯನ್ನು ಕಂಡ ತಾಯಿ ಸಾಬವ್ವ, "ಬೀದಿ ನಾಯಿಯನ್ನೇಕೆ ಮನೆವರೆಗೂ ತಂದಿದ್ದೀರ?" ಎಂದು ಬೈದಳು. ಗೌರಿ ಮತ್ತು ಸೋಮು ಧ್ವನಿಗೂಡಿಸಿ, "ಪಾಪ, ಈ ನಾಯಿಮರಿಯ ಕಾಲೊಂದು ಮುರಿದಿದೆ. ಇದು ತುಂಬಾ ಮುದ್ದಾಗಿದೆ. ನಾವು ಸಾಕೋಣ ಅಲ್ವಾ?" ಎಂದರು. "ನಿಮ್ಮನ್ನೇ ಸಾಕುವುದು ಕಷ್ಟವಾಗಿದೆ! ಇನ್ನು, ಈ ಬೀದಿ ನಾಯಿಯನ್ನೂ ಸಾಕಬೇಕಾ? ಇಲ್ಲ ಇಲ್ಲ ಈ ಅನಿಷ್ಟವನ್ನ ಹೊರಗೆ ಬಿಟ್ಟು ಬನ್ನಿ. ಎಲ್ಲಾದರೂ ಬದುಕುತ್ತೆ." ಎಂದಳು ಸಾಬವ್ವ. ಅಷ್ಟರಲ್ಲಿ ಹೊಲದಿಂದ ಬಂದ ಸೂಗಪ್ಪ, ಗೌರಿ- ಸೋಮುವಿನ ಸಪ್ಪೆಮುಖವನ್ನು ಒಮ್ಮೆ ಮತ್ತು ನಾಯಿಮರಿಯ ಕಡೆಗೊಮ್ಮೆ ನೋಡಿ,

“ಚಿಕ್ಕ ಮಕ್ಕಳು ಸಾಕಲು ತಂದಿರಬೇಕು. ಇರಲಿ ಬಿಡು, ಈ ನಾಯಿಮರಿಯೂ ನಮ್ಮ ಜೊತೆ ಇರಲಿ.” ಎಂದನು. “ನಿಮ್ಮಪ್ಪ, ನೀವು ಮತ್ತು ಈ ನಾಯಿ ಎಲ್ಲರೂ ಒಂದೇ.” ಎನ್ನುತ್ತ ಸಾಬವ್ವ ಅಡುಗೆಮನೆ ಹೊಕ್ಕು, ಪಾತ್ರೆಯನ್ನು ಜೋರಾಗಿ ಕುಕ್ಕುತ್ತ ಕೋಪದಿಂದ ಒಲೆ ಊದತೊಡಗಿದಳು.

ಸೂಗಪ್ಪ ನಾಯಿಮರಿ ಕಾಲಿಗೆ ಗಿಡಮೂಲಿಕೆ ಸವರಿದ. ಗೌರಿ ಸೋಮು ಅದರ ಮೈ ಸವರುತ್ತ ಮಲಗಿಸಿದರು. ಮರುದಿನ ನಾಯಿಮರಿಗೆ ‘ಸೂರಿ’ ಎಂದು ಹೆಸರಿಟ್ಟರು. ಒಂದೆರಡು ದಿನಗಳೆದಂತೆ ಸೂರಿಯ ಕಾಲು ಸುಧಾರಿಸಿತು. ನೋವು ಮರೆತ ಸೂರಿಯು ಸೂಗಪ್ಪ ಹೊಲಕ್ಕೆ ಹೊರಡುವಾಗಲೆಲ್ಲ ಅವನ ಕಾಲು ನೆಕ್ಕತೊಡಗಿತು. ಸೋಮು, ಸೂರಿಗೆ ತನ್ನ ಮಾತನ್ನೂ ಕೇಳುವಂತೆ ಹೇಳುತ್ತಿದ್ದ. ಆದರೆ ಸೂರಿ, ಅವನ ಮಾತು ಕೇಳದೆ ಗೌರಿಯತ್ತ ಓಡಿಹೋಗುತ್ತಿತ್ತು. ಬೇಸರದಿಂದ ಸೋಮು ಸೂರಿಯನ್ನೇ ಆಗಾಗ ಗದರಿಸತೊಡಗಿದ. ಇದರಿಂದಾಗಿ

ಸೂರಿ, ಸೋಮು ಕಂಡರೆ "ಗುರ್ ಗುರ್" ಎನ್ನುತ್ತ, ಗೌರಿ ಜೊತೆ ಸಲುಗೆಯಿಂದ ಆಡುತ್ತಿತ್ತು.

ಸೂರಿಯ ಈ ವರ್ತನೆ ಸೋಮುಗೆ ಹಿಡಿಸದಿದ್ದರಿಂದ ಕ್ರಮೇಣ ಆತನೂ ಸಾಬವ್ವಳ ಪಕ್ಷ ಸೇರಿದ. ಗೌರಿ ಮನೆಯವರೆಲ್ಲರಿಗೂ ಇಷ್ಟವಾಗುವಂತಿರು ಎಂದು ಎಷ್ಟೇ ತಿಳಿ ಹೇಳಿದರೂ ಸೂರಿ ಅವಳ ಮಾತೇ ಕೇಳುತ್ತಿರಲಿಲ್ಲ. ಸೂರಿ, ಗೌರಿಯನ್ನು ಮುಸು ಮುಸು ಮುದ್ದಾಡುವುದು, ಸಾಬವ್ವ- ಸೋಮು ಕಂಡರೆ "ಗುರ್" ಎನ್ನುವುದು ಅದಕ್ಕೆ ರೂಢಿಯಾಯಿತು.

ಗೌರಿ ಸೂರಿಗೆ ಥ್ಯಾಂಕ್ಸ್ ಕೊಡುವುದು, ಸೆಲ್ಯೂಟ್ ಅಮಾಡುವುದು ಸೇರಿದಂತೆ ಕುಣಿಯುವುದನ್ನೂ ಹೇಳಿಕೊಟ್ಟಳು. ಒಂದು ದಿನ ಎಲ್ಲ ಗೆಳತಿಯರನ್ನು ಮನೆಗೆ ಬರಲು ಹೇಳಿದಳು. ತನ್ನ ಮನೆಗೆ ಬಂದ ಗೆಳತಿಯರನ್ನೆಲ್ಲ ಸೂರಿಗೆ ತೋರಿಸಿ, "ಇವರೆಲ್ಲ ನನ್ನ ಬೆಸ್ಟ್ ಫ್ರೆಂಡ್ಸ್, ಈ ಸುಧಾ

ಮಾತ್ರ ನನ್ನ ಜೊತೆ ಆಗಾಗ ಜಗಳ ಮಾಡುತ್ತಾಳೆ ನೋಡು." ಎಂದು ತಮಾಷೆ ಮಾಡಿದಳು. ಸುಧಾಳನ್ನೇ ಗುರಾಯಿಸಿದ ಸೂರಿ, ಕ್ಷಣದಲ್ಲೇ ಅವಳ ಕಾಲನ್ನು ಪರಚಿಬಿಟ್ಟಿತು!

ಎಲ್ಲ ಗೆಳತಿಯರೂ ಜೋರಾಗಿ ಚೀರಾಡುತ್ತ ಓಡಿದರು. ಸುಧಾ ಅಳುತ್ತ ಮನೆ ಕಡೆ ಓಡಿದಳು. ಸೂರಿಯ ಈ ವರ್ತನೆಯಿಂದ ಗೌರಿಗೆ ವಿಪರೀತ ಕೋಪ ಬಂದು ಕೋಲಿನಿಂದ ಹೊಡೆದಳು.

"ಗೆಳತಿಯರ ಮುಂದೆ ಕೆಟ್ಟದಾಗಿ ನಡೆದುಕೊಂಡು ನನ್ನ ಗೆಳತಿಯರನ್ನು ಅವಮಾನಿಸಿದ್ದಕ್ಕಾಗಿ ಎಂದೂ ನಿನ್ನನ್ನು ಕ್ಷಮಿಸಲ್ಲ. ನಿನ್ನ ಮುಖ ನೋಡಲಾರೆ." ಎಂದು ಬೈಯುತ್ತ ಮನೆಯಿಂದ ಹೊರಗಟ್ಟಿದಳು.

ಮರುದಿನ ಗೌರಿ ಶಾಲೆಗೆ ಹೋಗುವಾಗ ಸೂರಿ ಬಾಗಿಲ ಬಳಿಯೇ ಮಲಗಿತ್ತು. ಕಣ್ಣಲ್ಲಿ ನೀರು ಸುರಿಸುತ್ತ "ಕ್ಷಮಿಸಿಬಿಡು" ಎನ್ನುವಂತೆ ನೋಡುತ್ತಿತ್ತು. ಆದರೂ ಗೌರಿ ಸೂರಿಯನ್ನು ಕ್ಷಮಿಸದೆ

ಅದರ ಬಗ್ಗೆ ಅಸಡ್ಡೆ ತೋರಿದಳು. ಇದರಿಂದ ಸಾಬವ್ವ- ಸೋಮುಗೆ ಒಳಗೊಳಗೇ ಖುಷಿಯಾಗುತ್ತಿತ್ತು. ಹೀಗೆ ಕೆಲವು ದಿನಗಳು ಕಳೆದ ಬಳಿಕ ರವಿವಾರದಂದು ಶಾಲೆಗೆ ರಜೆಯಿದ್ದ ಕಾರಣ ಗೌರಿ ಅಪ್ಪನಿಗೆ ಬುತ್ತಿ ಕೊಡಲು ಹೊಲದತ್ತ ಹೊರಟಿದ್ದಳು.

ದಾರಿಮಧ್ಯೆ ಇದ್ದಕ್ಕಿದ್ದಂತೆ ತೋಳವೊಂದು ಎದುರಾಗಿ, ಗೌರಿಯನ್ನು ಗುರಾಯಿಸಿ, "ಎಲೇ ಪೋರಿ, ನಿನ್ನನ್ನು ತಿಂದುಬಿಡುವೆ!" ಎಂದು ಕಟಕಟನೆ ಹಲ್ಲು ಮಸೆಯಿತು. ಭಯದಿಂದ ಗೌರಿ, "ತೋಳ... ತೋಳ... ತೋಳ...ಅಯ್ಯೋ ಕಾಪಾಡಿ... ಕಾಪಾಡಿ..." ಎಂದು ಕೂಗಿ ಜ್ಞಾನ ತಪ್ಪಿ ಬಿದ್ದು ಬಿಟ್ಟಳು. ಗೌರಿಗೆ ಗೊತ್ತಾಗದಂತೆ ಹಿಂಬಾಲಿಸಿಕೊಂಡು ಬಂದ ಸೂರಿಯು ತೋಳದ ಜೊತೆ ಕಾದಾಡಿತು. ಸೂರಿಯ ಹೊಡೆತಕ್ಕೆ ತೋಳ ಮೂರ್ಛೆ ತಪ್ಪಿ ಬಿದ್ದುಬಿಟ್ಟಿತು.

ಸೂರಿ ಹೊಲಕ್ಕೆ ಹೋಗಿ ಸೂಗಪ್ಪನನ್ನು, ಗೌರಿ ಬಿದ್ದಿರುವ ಸ್ಥಳಕ್ಕೆ

ಕರೆತಂದಿತು. ಪಕ್ಕದಲ್ಲಿ ಮೂರ್ಛೆ ತಪ್ಪಿ ಬಿದ್ದಿದ್ದ ತೋಳ ಕಂಡು ಸೂರಿ ಮತ್ತು ತೋಳ ಕಾದಾಡಿದ್ದು ಸೂಗಪ್ಪನಿಗೆ ತಿಳಿಯಿತು. ಸೂಗಪ್ಪ ಗೌರಿ ಮುಖಕ್ಕೆ ನೀರು ಸಿಂಪಡಿಸಿ, "ತೋಳದ ಕಥೆ ಮುಗಿದಿದೆ, ಎದ್ದೇಳಮಾ" ಎಂದನು. ಭಯದಲ್ಲೇ ಗೌರಿ ಮೆಲ್ಲಗೆ ಕಣ್ಣು ತೆರೆದಳು.

ಎದುರಿಗೆ ಸೂರಿ ಇತ್ತು! ಪಕ್ಕದಲ್ಲಿದ್ದ ಸೋಮು, "ಅಕ್ಕಾ, ನೀನು ಬುತ್ತಿ ತೆಗೆದುಕೊಂಡು ಹೊಲಕ್ಕೆ ಬರುವಾಗ ಈ ಸೂರಿ ನಿನ್ನನ್ನೇ ಹಿಂಬಾಲಿಸಿ ಬಂದಿದೆ. ತೋಳ ಕಂಡು ನೀನು ಎಚ್ಚರ ತಪ್ಪಿ ಬಿದ್ದಮೇಲೆ ನಮ್ಮ ಸೂರಿ ತೋಳವನ್ನು ಸಾಯಿಸಿ ಅಪ್ಪನನ್ನು ನಿನ್ನ ಬಳಿ ಕರೆತಂದಿದೆ! ಸೂರಿ ಇರದಿದ್ದರೆ ನೀನು ಬದುಕುತ್ತಿರಲಿಲ್ಲ..!" ಎಂದು ನಡೆದ ಘಟನೆ ವಿವರಿಸಿದ.

ಸಾಬವ್ವಗೂ ವಿಷಯ ತಿಳಿದು ಓಡೋಡಿ ಬಂದಳು. ಗೌರಿಯ ಗೆಳತಿಯರು ಹೊಲದತ್ತ ಬಂದರು. ಎಲ್ಲರಿಗೂ ಸೂರಿಯ ಸಾಹಸ ಮತ್ತು

ಗೌರಿ ಮೇಲಿನ ಪ್ರೀತಿಯ ಬಗ್ಗೆ ಅರಿವಾಯಿತು. ಎಲ್ಲರೂ ಗೌರಿಯನ್ನು ವಿಚಾರಿಸಿ ಸೂರಿಯ ಮೈ ಸವರಿದರು.

ಎಲ್ಲರೂ ಗೌರಿಯ ಆರೈಕೆಯಲ್ಲಿ ಮೈ ಮರೆತಿದ್ದಾಗ ಎಚ್ಚರಗೊಂಡ ತೋಳ, ಅಲ್ಲಿಂದ ಓಡಿಹೋಯಿತು. ಮುಂದೆಂದೂ ಅದು ಯಾರ ಕಣ್ಣಿಗೂ ಬೀಳಲಿಲ್ಲ. ಅಂದಿನಿಂದ ಸೂರಿ ಗೌರಿಯನ್ನು ಒಂದು ಕ್ಷಣವೂ ಬಿಟ್ಟಿರಲ್ಲ, ಎಲ್ಲಿ ಗೌರಿ ಇರುವಳೋ ಅಲ್ಲಿ ಸೂರಿ ಇರುತ್ತದೆ. ಗೌರಿ ಕಾಣಲಿಲ್ಲವೆಂದರೆ "ಕುಂಞ ಕುಂಞ" ರಾಗ ಹಾಡುತ್ತದೆ *

**ಲೇಖಕರು: ಶರಣು ಚಟ್ಟಿ**
**ಆಕರ: ಪುಸ್ತಕ ಮಿತ್ರ**
**ಪ್ರಕಾಶನ: ಅಕ್ಷರ ಮಂಟಪ**
**ಬೆಂಗಳೂರು**
**ಮೊ: 9986167684**

**ಮನ ಮಂಥನ**

* ನೀನಿರುವ ಸ್ಥಳದ ಹತ್ತಿರ ಅಪಾಯದಲ್ಲಿ ಸಿಲುಕಿದ್ದ ಯಾವುದಾದರೂ ಪಕ್ಷಿ–ಪ್ರಾಣಿಗೆ ಸಹಾಯ ಮಾಡಿದ್ದರೆ ಆ ಕುರಿತು ಒಂದು ಏಳೆಂಟು ವಾಕ್ಯ ಬರೆಯಲು ಪ್ರಯತ್ನಿಸು.

# ವನದೇವತೆಯ ಬಯಕೆ

**– ಅನು: ಪ್ರೇಮಾ ಶಿವಾನಂದ**



ಗೂಗಲ್ ಚಿತ್ರ

**ವ**ನದೇವತೆ, ನಿನ್ನ ಬಯಕೆ ಏನು?

ಮೇಲೆ, ಮೇಲೆ ಹಾರುತ್ತಿರುವ ಗಿಡುಗಗಳನ್ನು, ಹುಣ್ಣಿಮೆಯ ಚಂದ್ರನನ್ನು ನೋಡಲು ಬಯಸುತ್ತೇನೆ. ಜನರಿಗೆ ಮಲಗಲು ವಿಶಾಲವಾದ ಜಾಗವನ್ನು ಮತ್ತು ರಾತ್ರಿಯಲ್ಲಿ ನಕ್ಷತ್ರಗಳನ್ನು ನೋಡಲು ಬಯಸುತ್ತೇನೆ. ಹಾಗೆಯೇ ಶಾಂತಿಯನ್ನೂ ಕೂಡ.

ವನದೇವತೆ, ನಿನ್ನ ಬಯಕೆ ಏನು?

ಚಳಿಗಾಲದಲ್ಲಿ ಸುರಿಯುವ ಹಿಮವನ್ನು ಬಯಸುತ್ತೇನೆ. ಗಟ್ಟಿಮುಟ್ಟಾದ ಹಳೆಯ ಬಂಡೆ. ಬೆಳ್ಳಿಯ ಬಣ್ಣದ ನರಿಯು ವಿಶ್ರಮಿಸಿ ಉಸಿರಾಡಲು ಒಂದು ಬಂಡೆ ಬಯಸುತ್ತೇನೆ.

ವನದೇವತೆ, ನಿನ್ನ ಬಯಕೆ ಏನು?

ನನ್ನಲ್ಲಿ ಬರುವ ಜಿಂಕೆಗಳಿಗೆ ಸಾಕಷ್ಟು ಗಿಡಗಂಟಿಗಳನ್ನು ಬಯಸುತ್ತೇನೆ. ನನ್ನ ರೋಮದಿಂದ ಹೊರಡುವ ಬಿಳಲುಗಳನ್ನು ಬಯಸುತ್ತೇನೆ. ನನ್ನ ಬಳಿ ಬರುವ ಸಣ್ಣ ಗೂಬೆಗಳನ್ನು ಮರೆಮಾಚಲು ಹಸಿರು ತುಂಬಿದ ಗಿಡಮರಗಳು ಮತ್ತು ಸಕ್ಕರೆಯಂತ ಸಿಹಿಯಾದ ಹಣ್ಣುಗಳನ್ನು ಬಯಸುತ್ತೇನೆ.

ವನದೇವತೆ, ನಿನ್ನ ಬಯಕೆ ಏನು?

ಮಳೆಗಾಲದಲ್ಲಿ ಮಳೆಯನ್ನು ಬಯಸುತ್ತೇನೆ. ಹರಿಯುವ ನದಿಯಿಂದ ತಂಗಾಳಿ,

ಝೇಂಕರಿಸುವ ದುಂಬಿಗಳು, ಜೇನು ನೊಣಗಳು. ಎಲ್ಲೆಲ್ಲೂ ಸುಂದರವಾದ ಹೂವುಗಳು. ತೇವಾಂಶದಿಂದ ಕೂಡಿದ ಸತ್ವಯುತವಾದ ಮಣ್ಣನ್ನು ಬಯಸುತ್ತೇನೆ. ಸುವಾಸನೆ ಬೀರುವ ಮರಗಳನ್ನು ಬಯಸುತ್ತೇನೆ.

ವನದೇವತೆ, ನಿನ್ನ ಬಯಕೆ ಏನು?

ಕೋಮಲವಾದ ಪಾದಗಳನ್ನು ಹೊಂದಿರುವ ಸ್ವಚ್ಛ ಮನಸಿನ ಜನರು, ಪ್ರೀತಿಯಿಂದ ಮರಗಳನ್ನು ನೆಡಲಿ ಎಂಬ ಬಯಕೆ.

ವನದೇವತೆ, ನಿನ್ನ ಬಯಕೆ ಏನು?

ಯಾವಾಗಲೂ, ಎಂದೆಂದಿಗೂ, ನಿರಂತರವಾಗಿ ಮಕ್ಕಳು ಬರುವುದನ್ನು ನಾನು ಬಯಸುತ್ತೇನೆ. ಅವರು ತಿರುಗಾಡುವ ಪುಟ್ಟ ಪಾದಗಳ ಸ್ಪರ್ಶವನ್ನು ಮತ್ತು ತಮ್ಮ ಕೈಕಾಲುಗಳಿಂದ ಮುಟ್ಟಿ ಬೆಟ್ಟವನ್ನು

ಹತ್ತುವುದನ್ನು ಬಯಸುತ್ತೇನೆ. ನನ್ನ ಮೇಲೆ ಪಾಚಿ ಕಟ್ಟುವುದನ್ನು, ನನ್ನಲ್ಲಿರುವ ಹೂವಿನ ಸುವಾಸನೆಯನ್ನು 'ಘಂ' ಎಂದು ಮೂಸುವುದನ್ನು, ನದಿಯಲ್ಲಿನ ನೀರನ್ನು ಚಿಮ್ಮಿ ಆಟವಾಡುವುದನ್ನು, ತೆರೆದ ಹೃದಯದಿಂದ ನನ್ನಲಿನ ಪ್ರವಾಡಗಳನ್ನು ನೋಡುವುದನ್ನು, ಬೆರಗಾಗಿ ಪ್ರಶಂಸಿವುದನ್ನು ಬಯಸುತ್ತೇನೆ. ಅದಕ್ಕಾಗಿಯೇ ನಿರಂತರವಾಗಿ, ಕಾಲಾನುಕಾಲದವರೆಗೆ ನನ್ನನ್ನು ಭೇಟಿಯಾಗಲು ಬರಬೇಕೆಂದು ಬಯಸುತ್ತೇನೆ*

**ಕೃಪೆ: ಅಂತರಜಾಲ**

**ಮನ ಮಂಥನ**

* ದಟ್ಟವಾದ ಕಾಡು, ಹರಿಯುತ್ತಿರುವ ನದಿ, ದೊಡ್ಡ, ದೊಡ್ಡ ಬೆಟ್ಟಗಳನ್ನು ನೋಡಿದಾಗ ನಿನಗೆ ಏನು ಅನಿಸುತ್ತದೆ ಎಂಬುದರ ಕುರಿತು ಮಾತಾಡು.

# Forest, what would you like



ಮಕ್ಕಳಿಗಾಗಿ

**Forest, what would you like?**

**I would like soaring hawks[1] and the harvest moon. I would like open spaces for people to lie down to look at the stars at night. Peace[2]. Peace. Peace.**

**ಹೊಸ ಪದಗಳು**

1. **Hawk** (ಹಾಕ್) – **ಗಿಡುಗ**
2. **Peace** (ಪೀಸ್) – **ಶಾಂತಿ**

**Forest, what would you like?**

**I would like snow[3] in Winter. An icy river and a crystal rock, a rock with a fossil, a rock to rest on. Rocks[4]. Breath of silver fox.**

**Forest, what would you like?**

**I would like thickets for my deer, burrows for my furry ones, deep-green fir tree wings to hide[5] my tiny owls. And later, maple sugar**

**ಹೊಸ ಪದಗಳು**

**3. Snow (ಸ್ನೊ) – ಹಿಮ**

**4. Rock (ರಾಕ್) – ಬಂಡೆ**

**5. Hide (ಹೈಡ್) – ಮುಚ್ಚಿಡು/ಮರೆಮಾಡು**

Forest[6], what would you like?

I would like rain in Spring[7]. Breezes[8] off the melting river. More moss. Bees[9] buzzing. Flowers every where. I would like moist soil.

Forest, Forest, what would you like?

Tender feet. Cleaner trails. People planting[10] trees. Love, love, love.

**ಹೊಸ ಪದಗಳು**

6. Forest (ಫಾರೆಸ್ಟ್) – ಕಾಡು/ಅರಣ್ಯ
7. Spring (ಸ್ಪ್ರಿಂಗ್) – ವಸಂತ ಕಾಲ
8. Breeze (ಬ್ರೀಜ್) – ತಂಗಾಳಿ
9. Bee (ಬಿ) – ಜೇನುಹುಳು
10. Plant (ಪ್ಲಾಂಟ್) – ಸಸಿನೆಡು

Forest, what would you like?

I would like Children, always Children, ever Children, rambling my soils and rocks and limbs and moss always Children sniffing my flowers, laughing at my squirrelishness[11], splashing my waters, open hearts, open mouths wonder at the hundred million miracles[12] of me.

I would like you to visit. Often. And linger.

ಕೃಪೆ: ಅಂತರಜಾಲ

**ಹೊಸ ಪದಗಳು**

11. **Squirrel** (ಸ್ಕ್ವಿರಲ್) – ಅಳಿಲು

12. **Miracle** (ಮಿರಾಕಲ್) – ಪವಾಡ

**ಸಂಪರ್ಕ ಮಾಹಿತಿ:**
**ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ**
**# 76,'ಪುಷ್ಪಾಂಜಲಿ' 3ನೇ ಅಡ್ಡರಸ್ತೆ,**
**ಶಿವಗಿರಿ, ಧಾರವಾಡ 580 007**
**ಮೊ: 99866 61055**
**dhwanitrust@gmail.com**
**www. dhwanitrust.org**


**'ಧ್ವನಿ' ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ**
**ಉಚಿತ ಹಂಚಿಕೆಗಾಗಿ**


ಗಮನಿಸಿ:
ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರುವುದು ಅಪಕ್ಷಣೀಯ.